# ಜಿಲ್ಲಾಧಿಕಾರಿಗಳು ಹಾಗೂ ಫೆಡರಲ್ ಸಹಕಾರ ಸಂಘಗಳ ಜಿಲ್ಲಾ ಚುನಾವಣಾಧಿಕಾರಿಗಳ ಕಾರ್ಯಾಲಯ, ಚಿಕ್ಕಬಳ್ಳಾಪುರ ಜಿಲ್ಲೆ, ಚಿಕ್ಕಬಳ್ಳಾಪುರ-562101

**ನಂ.ಜಿ.ಚು.ಚಿ/ಚುನಾವಣೆ/ಚಿಮುಲ್/ಸಿಆರ್- 25/2025-26** **ದಿನಾಂಕ: 11/11/2025**

## ನಮೂನೆ-XI
## (ನಿಯಮ 14(1) ರಡಿ ಅಧಿಸೂಚನೆ)

ಮಾನ್ಯ ಆಯುಕ್ತರು, ಚುನಾವಣಾ ಪ್ರಾಧಿಕಾರ, ಬೆಂಗಳೂರು ರವರ ಆದೇಶ ಸಂಖ್ಯೆ: ಸಚುಪ್ರಾ/ಆಡಳಿತ/ಪೆಸಸಂಚುನೇ/08/2024-25, ದಿನಾಂಕ: 15.06.2024 ರ ಆದೇಶದಲ್ಲಿ ದಿನಾಂಕ: 01.01.2025 ರಿಂದ 31.12.2025 ರವೆಗೆ ನಡೆಯುವ ಆಡಳಿತ ಮಂಡಲಿ ಸದಸ್ಯರ ಸಾಮಾನ್ಯ, ಖಾಲಿ ಬಿದ್ದ ಸ್ಥಾನ, ಪುನಃಶ್ಚೇತನಗೊಂಡ ಸಹಕಾರ ಸಂಘಗಳ/ಆಡಳಿತಾಧಿಕಾರಿ, ವಿಶೇಷಾಧಿಕಾರಿ ನೇಮಕಗೊಂಡ ಮತ್ತು ಹೊಸದಾಗಿ ನೋಂದಣಿಯಾದ ಸಹಕಾರ ಸಂಘಗಳ ಆಡಳಿತ ಮಂಡಳಿ ಚುನಾವಣೆ ಮತ್ತು ತತ್ಪರಿಣಾಮ ಪದಾಧಿಕಾರಿಗಳ ಚುನಾವಣೆಗಳನ್ನು ನಡೆಸಲು ಜಿಲ್ಲಾಧಿಕಾರಿಗಳು, ಚಿಕ್ಕಬಳ್ಳಾಪುರ ಜಿಲ್ಲೆ ರವರನ್ನು ಫೆಡರಲ್ ಸಹಕಾರ ಸಂಘಗಳ ಜಿಲ್ಲಾ ಚುನಾವಣಾಧಿಕಾರಿಗಳನ್ನಾಗಿ ನೇಮಿಸಿ ಆದೇಶಿಸಲಾಗಿರುತ್ತದೆ.

ಆದುದರಿಂದ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959 ಮತ್ತು ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960 ರ ಉಪಬಂಧಗಳ ಅಡಿಯಲ್ಲಿ ಮತ್ತು ಒಕ್ಕೂಟದ ಉಪನಿಯಮಗಳಲ್ಲಿ ನಿರ್ದಿಷ್ಟಪಡಿಸಿರುವಂತೆ ವಿವಿಧ ಕ್ಷೇತ್ರ/ಸ್ಥಾನಗಳಿಗೆ ಚುನಾವಣೆಯನ್ನು ನಡೆಸಬೇಕಾಗಿರುವುದರಿಂದ ಮಾನ್ಯ ಆಯುಕ್ತರು, ಸಹಕಾರ ಚುನಾವಣಾ ಪ್ರಾಧಿಕಾರ, ಬೆಂಗಳೂರು ರವರ ಆದೇಶ ಸಂಖ್ಯೆ: ಸಚುಪ್ರಾ/ಆಡಳಿತ/ಪೆಸಸಂಚುನೇ/08/2024-25, ದಿನಾಂಕ:15.06.2024 ರಲ್ಲಿ ಅಧಿಸೂಚನೆ ಹೊರಡಿಸುವ ಬಗ್ಗೆ ಚುನಾವಣಾಧಿಕಾರಿಗಳಿಗೆ ಅನುಮತಿ ನೀಡಿದ್ದು, ಕರ್ನಾಟಕ ಸಹಕಾರ ಸಂಘಗಳ ನಿಯಮಾವಳಿಗಳು 1960 ರ ನಿಯಮ 14(1) ರಂತೆ ನೀಡಿರುವ ಅಧಿಕಾರದನ್ವಯ ಶ್ರೀ ಪಿ.ಎನ್.ರವೀಂದ್ರ, ಭಾ.ಆ.ಸೇ, ಜಿಲ್ಲಾಧಿಕಾರಿ ಹಾಗೂ ಫೆಡರಲ್ ಸಹಕಾರ ಸಂಘಗಳ ಜಿಲ್ಲಾ ಚುನಾವಣಾಧಿಕಾರಿ, ಚಿಕ್ಕಬಳ್ಳಾಪುರ ಜಿಲ್ಲೆ ಆದ ನಾನು ಸಹಕಾರ ಸಂಘಗಳ ಜಂಟಿ ನಿಬಂಧಕರು, ಬೆಂಗಳೂರು ಪ್ರಾಂತ, ಬೆಂಗಳೂರು ರವರು ಸಹಕಾರ ಸಂಘಗಳ ಕಾಯ್ದೆ 1959 ಪ್ರಕರಣ 14 ರಡಿ ಚಿಕ್ಕಬಳ್ಳಾಪುರ ಜಿಲ್ಲಾ ಸಹಕಾರ ಹಾಲು ಒಕ್ಕೂಟವನ್ನು ಆದೇಶ ಸಂಖ್ಯೆ: ಜೆಆರ್‌ಬಿ/ಆರ್‌ಜಿಎನ್/07/2022-23 ದಿನಾಂಕ:22.06.2022 ರ ಆದೇಶದ ರೀತ್ಯಾ ವಿಭಜನೆ ಮಾಡಿ ಆದೇಶಿಸಿ ಚಿಕ್ಕಬಳ್ಳಾಪುರ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿಯಮಿತ, ಚಿಕ್ಕಬಳ್ಳಾಪುರ ಈ ಒಕ್ಕೂಟವನ್ನು ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ-1959 ರ ಪ್ರಕರಣ 07 ರನ್ವಯ ಆದೇಶ ಸಂಖ್ಯೆ: ಜೆಆರ್‌ಬಿ/ಆರ್‌ಜಿಎನ್/07/51572/2022-23, ದಿನಾಂಕ:22.06.2022ರ ಆದೇಶದಂತೆ ಹೊಸದಾಗಿ ನೋಂದಣಿ ಮಾಡಿ ಆದೇಶಿಸಿರುವುದರಿಂದ ಚಿಕ್ಕಬಳ್ಳಾಪುರ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿಯಮಿತ, ಚಿಕ್ಕಬಳ್ಳಾಪುರ ಇದರ ಚುನಾವಣೆಗೆ ಸಂಬಂಧಿಸಿದ ಈ ಕೆಳಕಂಡ ಕಾರ್ಯಕ್ರಮದ ವೇಳಾಪಟ್ಟಿಯನ್ನು ಈ ಮೂಲಕ ನಿಗಧಿಪಡಿಸಿರುತ್ತೇನೆ.

| ಕ್ರ. ಸಂ. | ಸಹಕಾರ ಸಂಘಗಳ ವರ್ಗೀಕರಣ | ಚುನಾವಣೆ ನಡೆಸಬೇಕಾದ ದಿನಾಂಕ: | ಚುನಾವಣೆಗಳ ಅವಧಿ |
|---|---|---|---|
| 1 | ಫೆಡರಲ್ ಸಂಸ್ಥೆ ಚಿಕ್ಕಬಳ್ಳಾಪುರ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿಯಮಿತ, ಚಿಕ್ಕಬಳ್ಳಾಪುರ | ದಿನಾಂಕ: 01/02/2026 | ಸೂಚಿತ ದಿನಾಂಕಕ್ಕೆ ಒಳಪಟ್ಟು ರಿಟರ್ನಿಂಗ್ ಅಧಿಕಾರಿಗಳು ಸಹಕಾರ ಸಂಘಗಳ ನಿಯಮಗಳು 1960 ರ ನಿಯಮ 14(3) (ಎ) & (ಬಿ) ರೀತ್ಯಾ ಚುನಾವಣೆಗಳ ಸ್ಥಳ, ದಿನ ಮತ್ತು ದಿನಾಂಕವನ್ನು ನಿಗಧಿಪಡಿಸಿ ಪ್ರತ್ಯೇಕವಾಗಿ ಚುನಾವಣಾ ವೇಳಾಪಟ್ಟಿಯನ್ನು ನಮೂನೆ-XIIರಲ್ಲಿ ಪ್ರಕಟಿಸತಕ್ಕದ್ದು ಹಾಗೂ ಸಹಕಾರ ಸಂಘದ ಆಡಳಿತ ಮಂಡಳಿ ಮತ್ತು ತತ್ಪರಿಣಾಮದ ಪದಾಧಿಕಾರಿಗಳ ಚುನಾವಣೆಯನ್ನು ಸಹಕಾರ ಸಂಘಗಳ ನಿಯಮಗಳು, 1960ರ ನಿಯಮ 14-ಎಜಿ ರಂತೆ ನಡೆಸತಕ್ಕದ್ದು. |

ಉದ್ದೇಶಿತ ಚುನಾವಣೆಗೆಗಾಗಿ ಸೂಚಿತ ದಿನಾಂಕಕ್ಕೆ ಒಳಪಟ್ಟು ರಿಟರ್ನಿಂಗ್ ಅಧಿಕಾರಿಗಳು ಸಹಕಾರ ಸಂಘಗಳ ನಿಯಮಗಳು, 1960ರ ನಿಯಮ 14(3)(ಎ) ರೀತ್ಯಾ ಚುನಾವಣೆ ನಡೆಯುವ ಸ್ಥಳ, ದಿನ ಮತ್ತು ದಿನಾಂಕವನ್ನು ನಿಗಧಿಪಡಿಸಿ ಪ್ರತ್ಯೇಕವಾಗಿ ಚುನಾವಣಾ ವೇಳಾಪಟ್ಟಿಯನ್ನು ನಮೂನೆ- XII ರಲ್ಲಿ ಸಾರ್ವಜನಿಕ ನೋಟೀಸ್ ಅನ್ನು ನೀಡಿ ಅದನ್ನು ತನ್ನ ಕಚೇರಿಯ ಸೂಚನಾ ಫಲಕದಲ್ಲಿ ಸಹಕಾರ ಸಂಘದ ಕಚೇರಿಯ ಸೂಚನಾ ಫಲಕದಲ್ಲಿ ಮತ್ತು ತಾನು ಅವಶ್ಯವೆಂದು ಭಾವಿಸುವಂತಹ ಇತರ ಸ್ಥಳಗಳಲ್ಲಿ ಪ್ರದರ್ಶಿಸುವ ಮೂಲಕ ನಾಮಪತ್ರಗಳನ್ನು ಆಹ್ವಾನಿಸತಕ್ಕದ್ದು.

ಸಹಕಾರ ಸಂಘಗಳ ನಿಯಮಗಳು, 1960 ರ ನಿಯಮ 14 (3)(ಬಿ) ರೀತ್ಯಾ ಮೇಲೆ ತಿಳಿಸಿರುವ ದಿನಾಂಕಗಳಿಗೆ ಅನುಗುಣವಾಗಿ ರಿಟರ್ನಿಂಗ್ ಅಧಿಕಾರಿಗಳು ಹೊರಡಿಸುವ ನಮೂನೆ-XIIರ ಚುನಾವಣಾ ನೋಟೀಸ್‌ನಲ್ಲಿ ಇತರೆ ವಿಷಯಗಳ ಜೊತೆಗೆ

1. ಸ್ಪರ್ಧಿಸಲು ಇಚ್ಛೆಯುಳ್ಳ ಅಭ್ಯರ್ಥಿಗಳಿಂದ ನಾಮಪತ್ರಗಳನ್ನು ಸ್ವೀಕರಿಸಲು ಚುನಾವಣೆಯ ದಿನಾಂಕದ ನಿಕಟ ಪೂರ್ವದ ಏಳು ಸ್ಪಷ್ಟ ದಿನವು ಕೊನೆಯ ದಿನಾಂಕವಾಗಿರತಕ್ಕದ್ದು, : (ನಿಯಮ 14-ಎ ಪ್ರಕಾರ).
2. ನಾಮಪತ್ರ ಸ್ವೀಕರಿಸಲು ನಿಗಧಿಯಾದ ಕೊನೆಯ ದಿನಾಂಕದ ನಿಕಟ ನಂತರದ ಮರುದಿನವು ನಾಮ ಪತ್ರಗಳ ಪರಿಶೀಲನಾ ದಿನಾಂಕವಾಗಿರತಕ್ಕದ್ದು : (ನಿಯಮ 14-ಬಿ ಮತ್ತು 14-ಬಿ(4) ಪ್ರಕಾರ)
3. ಉಮೇದುವಾರರಿಂದ ನಾಮಪತ್ರವನ್ನು ಹಿಂಪಡೆಯಲು ಕಡೆಯ ದಿನಾಂಕವು ಹಾಗೂ ಸಿಂಧುತ್ವ ಹೊಂದಿರುವ ಉಮೇದುವಾರರ ಪಟ್ಟಿಯ ಪ್ರಕಟಣಾ ದಿನಾಂಕವು ಮತ್ತು ಅವಶ್ಯಕವಿದ್ದಲ್ಲಿ ಅಭ್ಯರ್ಥಿಗಳಿಗೆ ಚಿಹ್ನೆ ಹಂಚಿಕೆ ದಿನಾಂಕವು, ಚುನಾವಣಾ ದಿನಾಂಕದ ನಿಕಟ ಪೂರ್ವ ಐದನೇ ಸ್ಪಷ್ಟ ದಿನವಾಗಿರತಕ್ಕದ್ದು: (ನಿಯಮ 14-ಸಿ, ಡಿ ಮತ್ತು ಇ ಪ್ರಕಾರ)
4. ಚಿಹ್ನೆಯ ಸಹಿತ ಕ್ರಮಬದ್ಧವಾಗಿ ಸ್ಪರ್ಧೆಯಲ್ಲಿರುವ ಅಭ್ಯರ್ಥಿಗಳ ಪಟ್ಟಿಯ ಪ್ರಕಟಣೆಯು ಚುನಾವಣಾ ದಿನಾಂಕದ ನಿಕಟ ಪೂರ್ವದ ಮೂರನೇ ದಿನದ ಸ್ಪಷ್ಟ ದಿನವಾಗಿರತಕ್ಕದ್ದು (ನಿಯಮ 14-ಡಿ ಮತ್ತು ಇ ಪ್ರಕಾರ)
5. ಮತದಾನ ನಡೆಯುವ ದಿನಾಂಕವನ್ನು ನಿಗಧಿಪಡಿಸಿ, ಸಮಯ ಬೆಳಿಗ್ಗೆ 9.00 ರಿಂದ ಸಂಜೆ 4.00 ಗಂಟೆಯವರೆಗೆ ನಿಗಧಿಪಡಿಸತಕ್ಕದ್ದು.
6. ಮತ ಎಣಿಕೆಯನ್ನು ಮತದಾನದ ದಿನಾಂಕದಂದು ಮತದಾನದ ಅವಧಿ ಮುಗಿದ ನಂತರ ಮಾಡುವುದು ಮತ್ತು ಮತ ಎಣಿಕೆಯ ನಂತರ ಫಲಿತಾಂಶವನ್ನು ಘೋಷಿಸುವುದು.

ಇವುಗಳನ್ನು ನಿರ್ದಿಷ್ಟಪಡಿಸಿ ಕೂಡಲೇ ಆಡಳಿತ ಮಂಡಳಿಯ ಸಾಮಾನ್ಯ ಚುನಾವಣೆಯನ್ನು ನಡೆಸಲು ಚಿಕ್ಕಬಳ್ಳಾಪುರ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿಯಮಿತ, ಚಿಕ್ಕಬಳ್ಳಾಪುರ ಇದರ ಆಡಳಿತಾಧಿಕಾರಿಗಳು ಕ್ರಮವಹಿಸತಕ್ಕದ್ದು ಮತ್ತು ತತ್ಪರಿಣಾಮದ ಪದಾಧಿಕಾರಿಗಳ ಚುನಾವಣೆಯನ್ನು ಸಹಕಾರ ಸಂಘಗಳ ನಿಯಮಗಳು 1960 ರ ನಿಯಮ 14-ಎಜಿ ರಂತೆ ನಡೆಸತಕ್ಕದ್ದು.

ಈ ಅಧಿಸೂಚನೆಯನ್ನು ಈ ಕೆಳಕಂಡಂತೆ ದಿನಾಂಕ: 11/11/2025 ರಂದು ನನ್ನ ಸಹಿ ಮತ್ತು ಕಚೇರಿ ಮೊಹರಿನೊಂದಿಗೆ ಹೊರಡಿಸಲಾಗಿರುತ್ತದೆ.

(ರವೀಂದ್ರ ಪಿ.ಎನ್.)
**ಜಿಲ್ಲಾಧಿಕಾರಿಗಳು ಹಾಗೂ ಫೆಡರಲ್ ಸಹಕಾರ**
**ಸಂಘಗಳ ಜಿಲ್ಲಾ ಚುನಾವಣಾಧಿಕಾರಿಗಳು,**
**ಚಿಕ್ಕಬಳ್ಳಾಪುರ ಜಿಲ್ಲೆ, ಚಿಕ್ಕಬಳ್ಳಾಪುರ**

**ಪ್ರತಿಯನ್ನು:**

1. ಮಾನ್ಯ ಆಯುಕ್ತರು, ಸಹಕಾರ ಚುನಾವಣಾ ಪ್ರಾಧಿಕಾರ, 3 ನೇ ಮಹಡಿ, ಶಾಂತಿನಗರ, ಟಿ.ಟಿ.ಎಂ.ಸಿ. 'ಎ' ಬ್ಲಾಕ್, ಕೆ.ಹೆಚ್. ರಸ್ತೆ, ಶಾಂತಿನಗರ, ಬೆಂಗಳೂರು ರವರ ಮಾಹಿತಿಗಾಗಿ ಸಲ್ಲಿಸಿದೆ.
2. ಚುನಾವಣಾಧಿಕಾರಿಗಳು, ಚಿಕ್ಕಬಳ್ಳಾಪುರ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿಯಮಿತ ಹಾಗೂ ಅಪರ ಜಿಲ್ಲಾಧಿಕಾರಿಗಳು, ಚಿಕ್ಕಬಳ್ಳಾಪುರ ಜಿಲ್ಲೆ ರವರಿಗೆ ಅಗತ್ಯ ಕ್ರಮಕ್ಕಾಗಿ.

3. ಆಡಳಿತಾಧಿಕಾರಿಗಳು, ಚಿಕ್ಕಬಳ್ಳಾಪುರ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿಯಮಿತ ಹಾಗೂ ಉಪವಿಭಾಗಾಧಿಕಾರಿಗಳು, ಚಿಕ್ಕಬಳ್ಳಾಪುರ ಉಪವಿಭಾಗ ರವರಿಗೆ ಅಗತ್ಯ ಕ್ರಮಕ್ಕಾಗಿ.
4. ಮಾನ್ಯ ಸಹಕಾರ ಸಂಘಗಳ ಜಂಟಿ ನಿಬಂಧಕರು, ಬೆಂಗಳೂರು ಪ್ರಾಂತ, ಬೆಂಗಳೂರು ರವರಿಗೆ ಮಾಹಿತಿಗಾಗಿ.
5. ಸಹಕಾರ ಸಂಘಗಳ ಉಪ ನಿಬಂಧಕರು, ಸಹಕಾರ ಇಲಾಖೆ, ಚಿಕ್ಕಬಳ್ಳಾಪುರ ಜಿಲ್ಲೆ, ಚಿಕ್ಕಬಳ್ಳಾಪುರ ರವರಿಗೆ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.
6. ವ್ಯವಸ್ಥಾಪಕ ನಿರ್ದೇಶಕರು, ಚಿಕ್ಕಬಳ್ಳಾಪುರ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿಯಮಿತ, ಚಿಕ್ಕಬಳ್ಳಾಪುರ ರವರ ಅಗತ್ಯ ಕ್ರಮಕ್ಕಾಗಿ ಕಳುಹಿಸುತ್ತಾ ಕರ್ನಾಟಕ ಸಹಕಾರ ಸಂಘಗಳ ಕಾಯಿದೆ 1959 ಮತ್ತು ನಿಯಮಾವಳಿಗಳು 1960 ರ ರೀತ್ಯಾ ಪರಿಶೀಲನಾಧಿಕಾರಿಗಳಿಂದ ಮತದಾರರ ಪಟ್ಟಿ ಪರಿಶೀಲನೆ ಮಾಡಿಸಿ ನಿಗಧಿತ ಸಮಯದೊಳಗೆ ಕರಡು ಮತದಾರರ ಪಟ್ಟಿ ಮತ್ತು ಅಂತಿಮ ಮತದಾರರ ಪಟ್ಟಿಯ ಪ್ರಕಟಣೆಗೆ ಅಗತ್ಯ ಕ್ರಮವಹಿಸಲು ಸೂಚಿಸಿದೆ.
7. ಕಚೇರಿ ಪ್ರತಿ.